1ನೇ ಅಪರ ಸಿ.ಜೆ. ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಮದ್ದೂರು

ದಿಃ 09.11.2023 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಹೆಚ್ ಎಂ ವಕೀಲರವರಿಂದಃ-

1. ನಾನು ವ್ಯವಸಾಯ ಮಾಡುತ್ತೇನೆ. ಪ್ರಸ್ತುತ ದಾವೆಯನ್ನು ಸಿದ್ಧರಾಮು ಎಂಬುವವರು ಶೇಖರ್ ಎಂಬುವವರ ವಿರುದ್ಧ ಹೂಡಿರುತ್ತಾರೆ. ದಾವೆಯನ್ನು ವಾದಿಯ ಹೆಸರಿಗಿದ್ದ ಜಮೀನನ್ನು ಪ್ರತಿವಾದಿಯ ಹೆಸರಿಗೆ ಖಾತೆ ಮಾಡಿಕೊಂಡಿರುವ ವಿರುದ್ಧ ಹೂಡಲಾಗಿದೆ. ನಾನು ದಾಖಲಾತಿ ನೋಡಿಲ್ಲ. ಸಾಕ್ಷಿ ಮುಂದುವರೆದು ಜನ ಮಾತನಾಡುತ್ತಿರುವುದನ್ನು ತಿಳಿದುಕೊಂಡಿದ್ದೇನೆ. ಜನರು ಸುಮಾರು 7-8 ವರ್ಷಗಳಿಂದ ಮಾತನಾಡಿಕೊಳ್ಳುತ್ತಿದ್ದರು. ನಾನು ಎಸ್ ಎಸ್ ಎಲ್ ಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ವಿಚಾರಣೆಗೆ ಬರುವ ಪೂರ್ವದಲ್ಲಿ ದಾಖಲಾತಿ ಯಾರಾ ಹೆಸರಿನಿಂದ ಯಾರಾ ಹೆಸರಿಗೆ ವರ್ಗಾವಣೆಯಾಗಿದೆ ಎಂದು ನೋಡಿರುವುದಿಲ್ಲ. ದಾವಾಸ್ವತ್ತು ಖುಷ್ಕಿ 3 ಗುಂಟೆ ಜಮೀನಾಗಿದೆ. ಪ್ರಸ್ತುತ ಕಬ್ಬು ಬೆಳೆಯುತ್ತಿದ್ದಾರೆ. ದಾವಾಸ್ವತ್ತಿನ ಚಕ್ಕುಬಂಧಿ ಗೊತ್ತಿದೆ. ಸರ್ವೆ ನಂಃ 146/11. ದಾವಾಸ್ವತ್ತಿನ ಉತ್ತರ ದಿಕ್ಕಿನಲ್ಲಿ 3 ಜಮೀನುಗಳಾದ ನಂತರ ನಮ್ಮ ಜಮೀನು ಸರ್ವೆ ನಂಃ 128 ಬರುತ್ತದೆ.

2. ಸಿದ್ಧರಾಮುರವರ ಮನೆಯ ವಿಚಾರ ನನಗೆ ಗೊತ್ತಿದೆ. ಪ್ರತಿವಾದಿಯವರ ಮನೆಯ ವಿಚಾರ ನನಗೆ ಅಷ್ಟಾಗಿ ಗೊತ್ತಿಲ್ಲ. ಸಿದ್ಧರಾಮುರವರು ನನ್ನ ಸ್ನೇಹಿತರು ಸಂಬಂಧಿಕರಲ್ಲ. ನಾನು ದಾವೆಯನ್ನು ಎಷ್ಟು ಜನರ ವಿರುದ್ಧ ಹೂಡಲಾಗಿದೆ ಎಂದು ತಿಳಿದುಕೊಂಡಿಲ್ಲ.

3. 4 ನೇ ಪ್ರತಿವಾದಿಯ ಚಿಕ್ಕಮ್ಮರವರ ಗಂಡನ ಹೆಸರು ಸಿದ್ದೇಗೌಡ ಎಂದರೆ

ನನಗೆ ಗೊತ್ತಿಲ್ಲ. ವಾದಿಯ ಗಂಡನ ಹೆಸರು ಸಿದ್ದೇಗೌಡ ಎಂದರೆ ಸರಿ. ವಾದಿಗೆ 3 ಜನ ಗಂಡುಮಕ್ಕಳು ಅವರುಗಳೆಂದರೆ ಸಿದ್ಧರಾಮು, ಅಪ್ಪಾಜಿ ಮತ್ತು ಶಂಕರ. ಮೂಲ ಜಮೀನು ಯಾರಿಗೆ ಸೇರಿತ್ತು ಎಂದು ನಾನು ದಾಖಲೆ ನೋಡಿಲ್ಲ. ದಾವಾಸ್ವತ್ತು ಸಿದ್ಧರಾಮುರವರ ತಂದೆಯ ಪಿತ್ರಾರ್ಜಿತ ಸ್ವತ್ತಾಗಿದೆ. ವಾದಿಯವರನ್ನು ಒಂದೇ ಊರಿಗೆ ಮದುವೆಮಾಡಲಾಗಿತ್ತು. ಸದರಿ ಊರು ಗೆಜ್ಜಲಗೆರೆ. ಸಿದ್ಧರಾಮುರವರ ತಂದೆಯ ಊರು ಕೊತ್ತನಹಳ್ಳಿ ಸಿದ್ಧರಾಮುರವರ ತಂದೆಯ ಹೆಸರು ಸಿದ್ಧೇಗೌಡ. ಸದರಿ ಸಿದ್ಧೇಗೌಡ ರವರು ಗೆಜ್ಜಲಗೆರೆಯಲ್ಲಿ ಅವರ ದೊಡ್ಡಮ್ಮನಿಗೆ ದತ್ತು ಬಂದಿದ್ದರು. ಸದರಿಯವರು ದತ್ತು ಬಂದಿದ್ದರು ಎನ್ನಲು ದಾಖಲೆ ನೋಡಿಲ್ಲ ಆದರೆ ಜನ ಹೇಳುತ್ತಿದ್ದರು.

4. ದಾವಾಸ್ವತ್ತು ಚೆನ್ನವೀರೇಗೌಡನ ಮಗ ಚೆನ್ನವೀರನಿಗೆ ಸೇರಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಚೆನ್ನವೀರೇಗೌಡನಿಗೆ ಎಷ್ಟು ಜನ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿ ಚಿಕ್ಕಮ್ಮರವರು ಚೆನ್ನವೀರೇಗೌಡನ ಮಗಳು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವಾಸ್ವತ್ತು ಚೆನ್ನವೀರೇಗೌಡರವರು 4 ನೇ ಪ್ರತಿವಾದಿಯವರಿಗೆ ನೀಡಿದ ಜಮೀನಾಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸಿದ್ಧರಾಮುರವರು ಸ್ವಾಧೀನದಲ್ಲಿದ್ದು 4 ನೇ ಪ್ರತಿವಾದಿ ಎಂದು ಬಂದಿರಲಿಲ್ಲ ಎನ್ನುತ್ತಾರೆ. ದಾವಾಸ್ವತ್ತು 4 ನೇ ಪ್ರತಿವಾದಿಗೆ ಅವರ ತಂದೆಯ ಮೂಲಕ ಬಂದಿದ್ದರು ಕೂಡಾ ಸಿದ್ಧರಾಮುರವರು ಸ್ವಾಧೀನದಲ್ಲಿದ್ದಾರೆಂದು ನಾನು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾಸ್ವತ್ತಿನ ಎಲ್ಲಾ ದಾಖಲೆಗಳು ಪ್ರತಿವಾದಿ-4 ರವರ ಹೆಸರಿನಲ್ಲಿರುವ ವಿಚಾರ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಯೇ ಇಂದಿಗೂ ಕೂಡಾ ದಾವಾಸ್ವತ್ತಿನ ಸ್ವಾಧೀನಾನುಭವ ಹೊಂದಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರು ಯಾವತ್ತೂ ಬಂದಿಲ್ಲ ಎನ್ನುತ್ತಾರೆ. ಸಿದ್ಧರಾಮುರವರು ಎಂದು ಕೂಡಾ ದಾವಾಸ್ವತ್ತಿಗೆ ಬಂದಿಲ್ಲ ಎಂದರೆ

ಸರಿಯಲ್ಲ. ಪ್ರತಿವಾದಿ-1 ರಿಂದ 3 ರವರು ಪ್ರತಿವಾದಿ-4 ರವರಿಗೆ ತಮ್ಮ ಮತ್ತು ತಮ್ಮನ ಮಕ್ಕಳು. ಪ್ರತಿವಾದಿಗಳೇ ದಾವಾಸ್ವತ್ತಿನ ಸ್ವಾಧೀನಾನುಭವ ಹೊಂದಿದ್ದು ವಾದಿಯಾಗಲೀ, ವಾದಿಯ ಗಂಡನಾಗಲೀ ಅಥವಾ ಸಿದ್ಧರಾಮು ಆಗಲೀ ಎಂದು ಕೂಡಾ ದಾವಾಸ್ವತ್ತಿನ ಮಾಲೀಕರಾಗಲೀ ಅಥವಾ ಸ್ವಾಧೀನಾನುಭವಾಗಲೀ ಹೊಂದಿರಲಿಲ್ಲ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿ-4 ರವರ ಹೆಸರು ಚಿಕ್ಕಮ್ಮ ಮತ್ತು ಅವರ ಗಂಡನ ಹೆಸರು ಸಿದ್ಧೇಗೌಡ ಎಂದು ಒಂದೇ ಹೆಸರಿರುವುದನ್ನು ದುರಪಯೋಗಪಡಿಸಿಕೊಂಡು ಸಿದ್ಧರಾಮು ರವರು ದಾವಾಸ್ವತ್ತು ನನ್ನದು ಎಂದು ಸುಳ್ಳು ನುಡಿಯುತ್ತಿದ್ದಾರೆ ಎಂದರೆ ಸರಿಯಲ್ಲ. ನನಗೆ ಸರ್ವೆ ನಂಃ 128 ರಲ್ಲಿ ಯಾವುದೇ ಜಮೀನು ಇರದಿದ್ದರೂ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಕೂಲಿ ಕೆಲಸ ಮಾಡುತ್ತಿದ್ದು ಸಿದ್ಧರಾಮುರವರಿಂದ ಹಣ ಪಡೆದು ಸುಳ್ಳು ಸಾಕ್ಷ್ಯ ನುಡಿಯಲು ಬಂದಿದ್ದೇನೆಂದರೆ ಸರಿಯಲ್ಲ. ನಾನು ದಾವಾಸ್ವತ್ತನ್ನು ನೋಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

(ಶ್ರೀಮತಿ ನಳಿನ ಎಸ್. ಸಿ.)
1ನೇ ಅಪರ ಸಿವಿಲ್ ನ್ಯಾಯಾಧೀಶರು
ಮದ್ದೂರು.